# <u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>

**Ref**: 09/2022

ಡಬ್ಲ್ಯೂ ಡಬ್ಲ್ಯೂ-3

**<u>ದಿನಾಂಕ 14.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಪಾಟೀ ಸವಾಲುಃ 2 ನೇ ಪಕ್ಷಗಾರರ ಪರ ಶ್ರೀ ಎ.ಸಿ.ಎನ್. ವಕೀಲರಿಂದಃ**

ನಮ್ಮ ಕಂಪನಿಯಲ್ಲಿ ತಯಾರಾಗುವ ವಸ್ತುಗಳು ಬ್ರಾಂಡೆಡ್ ವಸ್ತುಗಳಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಸಂಸ್ಥೆಯು Export Oriented Unit (EOU) ಎಂದು ಪ್ರಮಾಣೀಕೃತಗೊಂಡಿರುತ್ತದೆ ಎಂದರೆ ಸರಿ. ವಿದೇಶಿ ಕಂಪನಿಗಳಿಂದ ಬಂದ ಆದೇಶದ ಪ್ರಕಾರ ಉತ್ಪನ್ನಗಳನ್ನು ತಯಾರು ಮಾಡುತ್ತಾರೆ ಎಂದರೆ ಸರಿ. ನಂಜನಗೂಡು ವಿಭಾಗವನ್ನು ಪ್ರಾರಂಭ ಮಾಡುವುದಕ್ಕಿಂತ ಮುಂಚೆ ಬೇರೆ ಯಾವುದೇ ಶಾಖೆಗಳು ಇರಲಿಲ್ಲ ಎಂದರೆ ಸರಿ. ಮೈಸೂರಿನಲ್ಲೂ ಸಹ ಅವರ ಸಂಸ್ಥೆ ಯಾವುದೂ ಇಲ್ಲ ಎಂದರೆ ಸರಿ. ನಂಜನಗೂಡು ಶಾಖೆ ಪ್ರಾರಂಭ ಮಾಡುವುದಕ್ಕೆ ಹಣ ಎಲ್ಲಿಂದ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಕಂಪನಿಯ ಬ್ಯಾಲೆನ್ಸ ಶೀಟನ್ನು ನೋಡಿಲ್ಲ.

2018 ರಲ್ಲಿ ಸಂಸ್ಥೆಯವರು ಲೇ ಆಫ್ ಹಾಗೂ ರಿಟ್ರೆಂಚ್ ಮಾಡಲು ಅನುಮತಿ ನೀಡಬೇಕು ಎಂದು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಆಗ ಕೆಲಸಗಾರರ ಸಂಖ್ಯೆ 100 ಕ್ಕೂ ಹೆಚ್ಚು ಇತ್ತು ಎಂದರೆ ಸರಿ. ನಾವು ತಕರಾರು ಹಾಕಿದ ನಂತರ ಸರ್ಕಾರ ಅನುಮತಿ ಕೊಡಲಿಲ್ಲ ಎಂದರೆ ಸರಿ. ಕೆಲವು ಕಾರ್ಮಿಕರು ಸಂಸ್ಥೆಯನ್ನು ನಡೆಸಲು ಸಾಧ್ಯವಾಗುತ್ತಿಲ್ಲ ಎನ್ನುವ ಕಾರಣಕ್ಕೆ ಸಂಸ್ಥೆಗೆ ರಾಜೀನಾಮೆ ಕೊಟ್ಟು ವಿ.ಆರ್.ಎಸ್. ತೆಗೆದುಕೊಂಡು ಹೋಗಿದ್ದರು ಎಂದರೆ ಸರಿ. ವಿ.ಆರ್.ಎಸ್. ತೆಗೆದುಕೊಂಡು ಹೋದ ಸಮಯದಲ್ಲಿ ಹೆಚ್ಚುವರಿ ವೇತನವನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಿ.ಆರ್.ಎಸ್. ತೆಗೆದುಕೊಂಡ ಕಾಲಕ್ಕೆ ಹಣದ ಮೊತ್ತವನ್ನು ಮಾಲೀಕರು ನೀಡಿರುತ್ತಾರೆ. ಕಾರ್ಮಿಕರ ಜೊತೆ ಮೇಲ್ವಿಚಾರಕರು ಮತ್ತು ವ್ಯವಸ್ಥಾಪಕ ಹುದ್ದೆಯಲ್ಲಿದ್ದವರು ಕೂಡ ವಿ.ಆರ್.ಎಸ್. ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ.

ಒಂದು ಬೇಲ್ ನಲ್ಲಿ 500 ಅಥವಾ 1000 ಕೆ.ಜಿ. ತೂಕದಷ್ಟು ಆದೇಶ ಕೊಡಬೇಕಾಗುತ್ತದೆ, ಅದಕ್ಕಿಂತ ಕಡಿಮೆ ತೂಕದ್ದಾದ್ದರೆ ಅದನ್ನು ಪೂರೈಕೆ ಮಾಡುವುದಿಲ್ಲ ಎಂದರೆ ಸಾಕ್ಷಿ ಬೆಂಗಳೂರಿನ ತಾವರಕೆರೆ ವಿಭಾಗಕ್ಕೆ

ಸದರಿ ಬೇಲನ್ನು ತರಿಸಿಕೊಂಡು ನಮ್ಮ ಸಂಸ್ಥೆಗೆ ಎಷ್ಟು ಬೇಕೋ ಅಷ್ಟನ್ನು ತರಿಸಿಕೊಳ್ಳುತ್ತಿದ್ದರು. ಚೈನಾದಿಂದ ನೇರವಾಗಿ ನಮ್ಮ ಸಂಸ್ಥೆಗೆ ಬೇಲ್‌ಗಳು ಬರುತ್ತಿದ್ದವು ಆದರೆ ನಾನು ಹೇಳಿದ ರೀತಿಯಲ್ಲಿ ತಾವರಕೆರೆ ವಿಭಾಗಕ್ಕೆ ಬರುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಕೋವಿಡ್ ಸಮಯದಲ್ಲಿ ನಾವು ಪೂರೈಕೆ ಮಾಡುತ್ತಿದ್ದ ಮೂರು ಜನ ಅಮೇರಿಕಾದ ಗ್ರಾಹಕರು ದಿವಾಳಿ ಘೋಷಣೆ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಯಾರೋಪ್‌ಗೆ ರಫ್ತು ಮಾಡಬೇಕಾಗಿದ್ದ ಆದೇಶವನ್ನು ಅವರು ರದ್ದು ಪಡಿಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಕೋವಿಡ್ ಸಮಯದಲ್ಲಿ 250-300 ಕೆ.ಜಿ. ಕಚ್ಚಾವಸ್ತು ಕಾರ್ಖಾನೆಯಲ್ಲಿ ಉಳಿದುಕೊಂಡಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಉಳಿದುಕೊಂಡಿದ್ದ ಕಚ್ಚಾವಸ್ತುಗಳನ್ನು ಬೇರೆ ಯಾರು ಮಾರಾಟ ಮಾಡುತ್ತಿದ್ದರೋ ಅವರಿಗೆ ಕಳುಹಿಸಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಯಾವಾಗ ಆದೇಶಗಳು ಬರಲಿಲ್ಲವೋ ಆಗ ಸಂಸ್ಥೆಯು ಲೇಆಫ ಮಾಡುವ ತೀರ್ಮಾನ ತೆಗೆದುಕೊಂಡಿತ್ತು ಎಂದರೆ, ಸಾಕ್ಷಿ ಲೇಆಫ ಮಾಡಿರುವುದಿಲ್ಲ ಎನ್ನುತ್ತಾರೆ.

ದಿನಾಂಕ 07.07.2020 ರಂದು ಲೇಆಫ ನೋಟೀಸ್ ಕೊಡಲಾಗಿತ್ತು ಎಂದರೆ ಸಾಕ್ಷಿ ಬಾಗಿಲಿಗೆ ಬೀಗ ಹಾಕಿ ಗೇಟ್‌ನಲ್ಲಿ ಸದರಿ ನೋಟೀಸ್ ಅಂಟಿಸಿದ್ದರು ಎನ್ನುತ್ತಾರೆ. ದಿನಾಂಕ 18.07.2020 ರಂದು 42 ಜನರಿಗೆ ರಿಟ್ರೆಂಚ್‌ಮೆಂಟ್ ಕೊಟ್ಟು ಕೆಲಸದಿಂದ ತೆಗೆದಿದ್ದರು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸಿ ಅದರಲ್ಲಿ ನಾನು ಒಬ್ಬ ಎಂದು ಉತ್ತರಿಸಿರುತ್ತಾರೆ. ಸದರಿ ರಿಟ್ರೆಂಚ್‌ಮೆಂಟ್ ಆದೇಶ ಸರಿಯಲ್ಲ ಎಂದು ಹೇಳಿ ಈ ಪ್ರಕರಣವನ್ನು ಹೂಡಿರುತ್ತೇವೆ ಎಂದರೆ ಸರಿ.

ಈ ರಿಟ್ರೆಂಚ್‌ಮೆಂಟ್ ಮಾಡಿದ್ದು ಸರಿಯಲ್ಲ ಎಂದು ಹೇಳಿ ಕೈಗಾರಿಕಾ ವಿವಾದ ಮಾಡಲಾಗಿತ್ತು ಎಂದರೆ ಸಾಕ್ಷಿ ಸಂಘದಿಂದ ಬಂದಿರುತ್ತದೆ ಎಂದು ಹೇಳುತ್ತಾರೆ. ಸದರಿ ಪ್ರಕರಣದಲ್ಲಿ ನನ್ನ ಪರವಾಗಿ ವಕೀಲರು ಭಾಗವಹಿಸಿರುತ್ತಾರೆ ಎಂದರೆ ಸರಿ. ಸದರಿ ಔದ್ಯಮಿಕ ನ್ಯಾಯಾಲಯದಲ್ಲೂ ಕೂಡ ನಾವು 42 ಜನರ ವಿವಾದ ಎಂದರೆ ಸರಿ. ಸದರಿ ಪ್ರಕರಣ ವಜಾಗೊಂಡಿರುತ್ತದೆ ಎಂದರೆ ಸರಿ. ಆದರೆ ಕಾರಣ ಗೊತ್ತಿಲ್ಲ ಎನ್ನುತ್ತಾರೆ. ಅದರ ದೃಢೀಕೃತ ನಕಲನ್ನು ನಾನು ಪಡೆದುಕೊಂಡಿರುತ್ತೇನೆ. ದಿನಾಂಕ 14.03.2025 ರಂದು ಆದೇಶ ಆಗಿರುತ್ತದೆ

ಎಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶವನ್ನು ನಾನು ಈ ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ.

ನಾನು ಕಾರ್ಮಿಕ ಇಲಾಖೆಯಲ್ಲಿ ಸಂಸ್ಥೆಯನ್ನು ದಿನಾಂಕ 07.07.2020 ರಂದು ಲೇಆಫ ಮಾಡಿದ್ದ ಬಗ್ಗೆ ವಿವಾದ ಮಾಡಿದ್ದೆ ಎಂದರೆ ಸರಿ. ಸದರಿ ಪ್ರಕರಣವು ಸುಮಾರು ಒಂದು ವರ್ಷದವರೆಗೆ ನಡೆದಿತ್ತು ಎಂದರೆ ನನಗೆ ಗೊತ್ತಿಲ್ಲ. ಕೋವಿಡ್ ಸಮಯದಲ್ಲಿ ಸರ್ಕಾರದ ಆದೇಶದ ಪ್ರಕಾರ ಒಂದು ವರ್ಷದ ಸಂಬಳವನ್ನು ಇ.ಎಸ್.ಐ.ರವರು ನೀಡಬೇಕು ಎಂದು ನಿಯಮ ಇದ್ದುದ್ದರಿಂದ ನಾನು ಒಂದು ವರ್ಷಗಳ ಕಾಲ ಆ ರೀತಿ ಸಂಬಳ ಪಡೆದುಕೊಂಡಿ ರುತ್ತೇನೆ ಎಂದು ಸಾಕ್ಷಿ 10 ತಿಂಗಳಿನಲ್ಲಿ 9 ತಿಂಗಳು ನಾನು ಪಡೆದುಕೊಂಡಿರುತ್ತೇನೆ ಎನ್ನುತ್ತಾರೆ. ಸದರಿ ಹಣವನ್ನು ಕೊಡಬೇಕಾದರೆ ಯಾವುದೇ ವಿವಾದ ಇತ್ಯರ್ಥದಲ್ಲಿ ಇರಬಾರದು ಎನ್ನುವ ನಿಯಮ ಇತ್ತು ಎಂದರೆ ನನಗೆ ಗೊತ್ತಿಲ್ಲ. ನಮ್ಮ ಯೂನಿಯನ್ ಮತ್ತು ಆಡಳಿತ ವರ್ಗದವರು ಒಂದು ಒಪ್ಪಂದ ಮಾಡಿಕೊಂಡಿದ್ದು ಅದರ ಪ್ರಕಾರ ಲೇಆಫ ಆಗಿದ್ದ 75 ಜನ ಕಾರ್ಮಿಕರನ್ನು ಮಾಡಿಕೊಳ್ಳಬೇಕು ಎನ್ನುವಂತೆ ಸಂಧಾನಾಧಿಕಾರಿಗಳ ಮುಂದೆ ಒಪ್ಪಂದ ಆಗಿತ್ತು ಎಂದರೆ ಸರಿ. ಸದರಿ ಒಪ್ಪಂದದಲ್ಲಿ ಒಂದು ವೇಳೆ ಆಡಳಿತ ವರ್ಗಕ್ಕೆ ಉತ್ಪಾದನೆಗೆ ಆದೇಶಗಳು ದೊರೆತು ಹೆಚ್ಚಿನ ಕಾರ್ಮಿಕರು ಬೇಕಾಗುವ ಸಂದರ್ಭ ಒದಗಿಬಂದಲ್ಲಿ ಸದರಿ ರಿಟ್ರೆಂಚ್ ಆಗಿದ್ದ 42 ಜನರಿಗೆ ಆದ್ಯತೆ ನೀಡುತ್ತೇವೆ ಎಂದು ಒಪ್ಪಿಕೊಳ್ಳಲಾಗಿತ್ತು ಎಂದರೆ ಒಪ್ಪಂದ ಆಗಿರುತ್ತದೆ. ಸಾಕ್ಷಿ ಮುಂದುವರೆದು ಆದರೆ ಸಿನಿಯಾರಿಟಿ ಪ್ರಕಾರ ತೆಗೆದುಕೊಂಡಿರುವುದಿಲ್ಲ ಎನ್ನುತ್ತಾರೆ. ಸಿನಿಯಾರಿಟಿ ಪಟ್ಟಿಯನ್ನು ಬೇರೆ ಬೇರೆ ವಿಭಾಗಕ್ಕೆ ಸಂಬಂಧಿಸಿದಂತೆ ವಿಭಾಗಾವಾರು ತಯಾರು ಮಾಡಲಾಗಿರುತ್ತದೆ ಎಂದರೆ ಸರಿ. ಅದರಂತೆ ವಿಭಾಗಾವಾರು ಕಿರಿಯ ಕಾರ್ಮಿಕರನ್ನು ಹೊರಗೆ ಕಳುಹಿಸಿರುತ್ತಾರೆ ಎಂದರೆ ಸರಿ. ಈಗ ತೆಗೆದುಕೊಳ್ಳುವಾಗಲೂ ಕೂಡ ವಿಭಾಗಾವಾರು ಹಿರಿಯ ಕಾರ್ಮಿಕರನ್ನು ತೆಗೆದುಕೊಂಡಿ ರುತ್ತಾರೆ ಎಂದರೆ ಇಬ್ಬರು ಕಿರಿಯ ಕಾರ್ಮಿಕರನ್ನು ತೆಗೆದುಕೊಂಡಿರುತ್ತಾರೆ ಎನ್ನುತ್ತಾರೆ. ಮೂರು ಜನ ಕಾರ್ಮಿಕರಿಗೆ ನೊಟೀಸ್ ಜಾರಿ ಮಾಡಿ, ಈಗ ಸಂಸ್ಥೆಗೆ ಉತ್ಪಾದನೆಗೆ ಆದೇಶಗಳು ಬಂದಿರುವುದರಿಂದ ನೀವು ಕೆಲಸಕ್ಕೆ ಬರಲು ಇಚ್ಛೆ ಪಟ್ಟರೆ ಬರಬಹುದು ಎಂದು ನೀಡಿರುತ್ತಾರೆ ಎಂದರೆ ಸಾಕ್ಷಿ ಬೇರೆ ವ್ಯಕ್ತಿ ನನಗೆ ಈ ವಿಚಾರವನ್ನು ತಿಳಿಸಿರುತ್ತಾರೆ ಎನ್ನುತ್ತಾರೆ. ಸದರಿ ಕೆಲಸ ತಾತ್ಕಾಲಿಕವಾಗಿದ್ದರಿಂದ ಹಾಗೂ

ಹಳೆಯ ಸೇವಾ ನಿರಂತರತೆ ನೀಡಬೇಕು ಎಂದು ಹೇಳಿ ಅವರುಗಳು ಕೆಲಸಕ್ಕೆ ಹೋಗಲಿಲ್ಲ ಎಂದರೆ ಸರಿ. ಲೇಆಫಗೆ ಸಂಬಂಧಪಟ್ಟ ಪ್ರಕರಣ ಇತ್ಯರ್ಥಗೊಂಡ ನಂತರ, 42 ಕಾರ್ಮಿಕರಿಗೆ ಸಂಬಂಧಪಟ್ಟ ರಿಟ್ರೆಂಚ್‌ಮೆಂಟ್ ಪ್ರಕರಣ ಉಳಿದಿತ್ತು ಎಂದರೆ ಸರಿ. ಆ 42 ಜನ ಕಾರ್ಮಿಕರ ಪ್ರಕರಣವೇ ಔದ್ಯಮಿಕ ನ್ಯಾಯಾಲಯಕ್ಕೂ ಹೋಗಿತ್ತು ಹಾಗೂ ಸದರಿ ಪ್ರಕರಣವು ಈ ನ್ಯಾಯಾಲಯಕ್ಕೂ ಬಂದಿರುತ್ತದೆ ಎಂದರೆ ಸರಿ. ಲೇಆಫ ಮಾಡಿದ್ದ ಬಗ್ಗೆ ಔದ್ಯಮಿಕ ನ್ಯಾಯಾಲಯಕ್ಕಾಗಲೀ ಅಥವಾ ಈ ನ್ಯಾಯಾಲಯಕ್ಕಾಗಲೀ ವಿವಾದ ಬಂದಿರುವುದಿಲ್ಲ ಎಂದರೆ ಗೊತ್ತಿಲ್ಲ. ದಿನಾಂಕ 19.07.2020 ರಂದು ಕೆಲಸ ನಿರಾಕರಣೆ ಆದ ಪ್ರಕರಣ ಈ ನ್ಯಾಯಾಲಯ ಹಾಗೂ ಔದ್ಯಮಿಕ ನ್ಯಾಯಾಲಯದ ಮುಂದೆ ಬಾಕಿ ಇರುತ್ತದೆ ಎಂದರೆ ಸರಿ. ಆದರೆ ಬೋನಸ್ ಪ್ರಕರಣ ಒಂದು ಇರುತ್ತದೆ ಎಂದು ಹೇಳುತ್ತಾರೆ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.) (ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**